ಕರ್ನಾಟಕ ಸರಕಾರ

(ಜಿಲ್ಲಾ ಪಂಚಾಯತ ಬೀದರ )

# ಶಾಲಾ ಶಿಕ್ಷಣ ಇಲಾಖೆಯ, ಉಪ ನಿರ್ದೇಶಕರ ಕಛೇರಿ ಬೀದರ ಜಿಲ್ಲೆ ಬೀದರ

ಸಂಖ್ಯೆ: ಜಿ2/ಖಾಪ್ರಾಶಾ/ಮಾ.ನ/08/2023-24/1109 ದಿನಾಂಕ:31-05-2023.

**-:ಜ್ಞಾಪನ:-**

ವಿಷಯ: ಶರಣ ಬಸವಾ ಪಬ್ಲಿಕ್ ಕಿರಿಯ ಪ್ರಾಥಮಿಕ ಶಾಲೆ, ಗೋರನಳ್ಳಿ ತಾ.ಬೀದರ ಈ ಶಾಲೆಗೆ 01 ರಿಂದ 05ನೇ ತರಗತಿಗೆ ಅನುದಾನ ರಹಿತವಾಗಿ ಪ್ರಥಮ ಮಾನ್ಯತೆ ಮತ್ತು ಮಾನ್ಯತೆ ನವೀಕರಣ ನೀಡುವ ಕುರಿತು.

ಉಲ್ಲೇಖ:1. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೀದರ ರವರ ಪ್ರಸ್ತಾವನೆಸಂಖ್ಯೆ:ಜಿ1/ಖಾಪ್ರಾಶಾ/ ಮಾನ್ಯತೆ.ನವೀಕರಣ/2022-23 ದಿನಾಂಕ:13-06-2022

2. ಮಾನ್ಯ ಆಯುಕ್ತರು ಸಾ.ಶಿ.ಇ ಬೆಂಗಳೂರು ರವರ ಪತ್ರ ಸಂಖ್ಯೆ:ಸಿ7(3) ಪ್ರಾಶಾಅ/ಖಾಶಾಮಾನ/01/2021-22 ದಿನಾಂಕ:04-08-2021

*****

**ಪೀಠಿಕೆ:-**

ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ ರವರ ಅಧೀನದಲ್ಲಿ ನಡೆಯುತ್ತಿರುವ ಶರಣ ಬಸವಾ ಪಬ್ಲಿಕ್ ಕಿರಿಯ ಪ್ರಾಥಮಿಕ ಶಾಲೆ, ಗೋರನಳ್ಳಿ ತಾ.ಬೀದರ ಕನ್ನಡ ಮಾಧ್ಯಮದಿಂದ ಆಂಗ್ಲ ಮಾಧ್ಯಮಕ್ಕೆ ಪರಿವರ್ತನೆ ಮಾಡಿಕೊಂಡಿರುವ ಪ್ರಯುಕ್ತ 01 ರಿಂದ 05ನೇ ತರಗತಿ 2020-21ನೇ ಸಾಲಿಗೆ ಆಂಗ್ಲ ಪ್ರಥಮ ಮಾನ್ಯತೆ ನೀಡಿ 2021-22ನೇ ಸಾಲಿಗೆ ಮಾನ್ಯತೆ ನವೀಕರಿಸಲು ಉಲ್ಲೇಖ(01)ರಂತೆ ಸಂದರ್ಶನ ವರದಿಯೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ, ಉಲ್ಲೇಖ(02)ರಂತೆ ಉಪನಿರ್ದೇಶಕರು (ಆಡಳಿತ) ರವರಿಗೆ ಮಾನ್ಯತೆ ನವಿಕರಿಸಲು ಅನುಮತಿ ನೀಡಿರುವುದರಿಂದ ಈ ಕೆಳಗಿನಂತೆ ಆದೇಶ.

**ಆದೇಶ:-**

ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ ರವರ ಅಧೀನದಲ್ಲಿ ನಡೆಯುತ್ತಿರುವ ಶರಣ ಬಸವಾ ಪಬ್ಲಿಕ್ ಕಿರಿಯ ಪ್ರಾಥಮಿಕ ಶಾಲೆ, ಗೋರನಳ್ಳಿ ತಾ.ಬೀದರ ಈ ಶಾಲೆಗೆ 01 ರಿಂದ 05ನೇ ತರಗತಿ ಆಂಗ್ಲ ಮಾಧ್ಯಮಕ್ಕೆ 2020-21ನೇ ಸಾಲಿಗೆ ಆಂಗ್ಲ ಮಾಧ್ಯಮಕ್ಕೆ ಪ್ರಥಮ ಮಾನ್ಯತೆ ನೀಡಿ 2021-22ನೇ ಸಾಲಿಗೆ ಮಾನ್ಯತೆ ನವೀಕರಣವನ್ನು ಅನುದಾನ ರಹಿತವಾಗಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ತಾತ್ಕಾಲಿಕವಾಗಿ ನೀಡಿದೆ.

1. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಮಾನ್ಯತೆ ನಿಯಮಗಳು-1999ರ ನಿಯಮ-4ರಲ್ಲಿನ ಎಲ್ಲಾ ನಿಯಮಗಳನ್ನು ಪಾಲಿಸತಕ್ಕದ್ದು.
2. ಶಾಲೆಯ ಸ್ಥಳ ಕಟ್ಟಡ ಹಾಗೂ ಆಟದ ಮೈದಾನಗಳನ್ನು ಶಾಲೆಯ ಗೌರ್ನಿಂಗ್ ಕೌನ್ಸಿಲ್ ಅಥವಾ ಶಾಲಾ ಆಡಳಿತ ಮಂಡಳಿಯ ಹೆಸರಿಗೆ ನೋಂದಣಿಯಾಗಿರತಕ್ಕದ್ದು.
3. ಶಾಲೆಯ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಉತ್ತಮ ಕಟ್ಟಡ, ಸ್ಥಳಾವಕಾಶ, ನೀರು ಮತ್ತು ಶೌಚಾಲಯಗಳನ್ನು ಹೊಂದಿರತಕ್ಕದ್ದು.
4. ಹೆಣ್ಣುಮಕ್ಕಳಿಗೆ ಪ್ರತೇಕ ಶೌಚಾಲಯ ಒದಗಿಸತಕ್ಕದ್ದು.
5. ಶಾಲೆಯು ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಪ್ರಯೋಗಾಲಯ ಉಪಕರಣ, ಗ್ರಂಥಾಲಯ ಪುಸ್ತಕಗಳು, ಕ್ರೀಡೋಪಕರಣಗಳು ಹಾಗೂ ಇತರೆ ಪಾಠೋಪಕರಣಗಳನ್ನು ಮತ್ತು ವಿಜ್ಞಾನ ಇತರೆ ಸಾಮಗ್ರಿಗಳು ಹೊಂದಿರತಕ್ಕದ್ದು.
6. ಶಾಲೆಯು ಪ್ರಸ್ತುತ ಜಾರಿಯಲ್ಲಿರುವ ಶುಲ್ಕ ನಿಯಂತ್ರಣ ನಿಯಮಗಳನ್ನು ಪಾಲನೆ ಮಾಡತಕ್ಕದ್ದು.
7. ಕರ್ನಾಟಕ ಉಚಿತ & ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ನಿಯಮಗಳು-2012ರಡಿ ರೂಪಿಸಿರುವ ನಿಯಮಗಳಿಗೆ ಬಧ್ಧರಾಗಿರತಕ್ಕದ್ದು.

ಮು.ತಿ.ನೋ-2

8. ಶಾಲೆಯ ಶಿಕ್ಷಕರು ಹಾಗೂ ಇತರೆ ಸಿಬ್ಬಂದಿಗೆ ಸೇವಾ ಭದ್ರತೆಯನ್ನು ಒದಗಿಸತಕ್ಕದ್ದು ಹಾಗೂ ಬ್ಯಾಂಕ ಮೂಲಕ ವೇತನವನ್ನು ಪಾವತಿಸತಕ್ಕದ್ದು
9. ಶಾಲೆಯು 1995 ನಿಯಮಗಳ ನಿಯಮ 18, 19, 20 ರಲ್ಲಿ ತಿಳಿಸಿರುವಂತೆ ಪಠ್ಯಕ್ರಮ, ಪಠ್ಯಪುಸ್ತಕ, ಬೋಧನಾ ಮಾಧ್ಯಮ, ಪರೀಕ್ಷಾ ನಿಯಮಗಳು ಹಾಗೂ ಸರ್ಕಾರ ನಿಗಧಿಪಡಿಸುವ ಶಾಲಾ ವೇಳಾಪಟ್ಟಿಯನ್ನು ಪಾಲನೆ ಮಾಡತಕ್ಕದ್ದು,
10. ಇಲಾಖೆಯು ವಿಧಿಸುವ ಇತರೆ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಶಾಲೆಯ ಮಾನ್ಯತೆಯನ್ನು ರದ್ದುಗೊಳಿಸುವ ಅಧಿಕಾರ ಇಲಾಖೆ ಕಾಯ್ದಿರಿಸಿಕೊಂಡಿದೆ.
11. ಪ.ಜಾತಿ/ಪ.ಪಂಗಡದ ಆಡಳಿತ ಮಂಡಳಿಯವರು ನಡೆಸುತ್ತಿರುವ ಶಾಲೆಯಲ್ಲಿ ಪ್ರತಿಶತ 50 ಪ.ಜಾತಿ/ಪ.ಪಂಗಡದ ಮಕ್ಕಳು/ಶಿಕ್ಷಕರು ಕಡ್ಡಾಯವಾಗಿ ಇರತಕ್ಕದು.
12. ಶಾಲಾ ಸುರಕ್ಷತಾ ಕ್ರಮಗಳನ್ನು ಅನುಷ್ಠಾನಗೊಳಿಸುವುದು.
13. ಸಿ.ಸಿ ಕ್ಯಾಮರಾಗಳನ್ನು ಕಡ್ಡಾಯವಾಗಿ ಅಳವಡಿಸುವುದು.
14. ತರಬೇತಿ ಪಡೆದ ಶಿಕ್ಷಕರನ್ನು ಮಾತ್ರ ನೇಮಕ ಮಾಡಿಕೊಳ್ಳತಕ್ಕದ್ದು. ಅವರ ನೇಮಕಗಳನ್ನು ರೋಷ್ಟರ ಪದ್ಧತಿಯ ಪ್ರಕಾರ ವಿಧ್ಯಾರ್ಥಿಗಳ ಮತ್ತು ಶಿಕ್ಷಕರ ಅನುಪಾತದಂತೆ 1:40 ರಂತೆ ಮಾತ್ರ ಇರತಕ್ಕದ್ದು.
15. ಪ್ರತಿ ತರಗತಿಯಲ್ಲಿ ಮಕ್ಕಳ ಸಂಖ್ಯೆ ಮತ್ತು ಸರಾಸರಿ ಹಾಜರಿ 40:50 ರಂತೆ ಇರತಕ್ಕದ್ದು. ಇಲ್ಲವಾದಲ್ಲಿ ಶಾಲೆಯು ಮುನ್ನಣೆ ಪಡೆಯಲು ಅರ್ಹತೆ ಹೊಂದಿರುವುದಿಲ್ಲ.
16. ಮುಂದಿನ ವರ್ಷಗಳಲ್ಲಿ ದಾಖಲಾತಿ/ಹಾಜರಾತಿ ಕಡಿಮೆಯಾದಲ್ಲಿ ಮಾನ್ಯ ಆಯುಕ್ತರ ಕಛೇರಿ ಉಲ್ಲೇಖ(3)ರ ಪತ್ರದಲ್ಲಿ ತಿಳಿಸಿರುವಂತೆ ಶಾಲೆಯನ್ನು ಮುಚ್ಚಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

(ಸಲೀಂ ಪಾಷ) 31/5/23
ಉಪನಿರ್ದೇಶಕರು(ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಬೀದರ.

ಗೆ,
ಅಧ್ಯಕ್ಷರು/ಕಾರ್ಯದರ್ಶಿಗಳು,
ಶರಣಬಸವೇಶ್ವರ ವಿದ್ಯಾವರ್ಧಕ ಸಂಘ,
ಕಲಬುರಗಿ

ಪ್ರತಿಯನ್ನು:-
1) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೀದರ
2. ಮುಖ್ಯ ಗುರುಗಳು, ಶರಣ ಬಸವಾ ಪಬ್ಲಿಕ್ ಕಿರಿಯ ಪ್ರಾಥಮಿಕ ಶಾಲೆ ಗೋರನಳ್ಳಿ ತಾ.ಬೀದರ

... ಅನಧಿಕೃತವಾಗಿ ತರಗತಿ / ವಿಭಾಗಗಳನ್ನು (ಬ್ರಾಂಚ್) ತೆರಯಬಾರದು.

15. ಶಾಲೆಗೆ ಸಂಬಂಧಿಸಿದ ಶಾಲಾ ಕಟ್ಟಡಗಳು ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಹಗಲು ಅಥವಾ ರಾತ್ರಿಯಲ್ಲಿ, ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ಅಥವಾ ರಾಜಕೀಯ ಮತ್ತು ಶೈಕ್ಷಣಿಕೇತರ ಚಟುವಟಿಕೆಗಳಿಗೆ ನೀಡಬಾರದು.
16. ಶಾಲೆಯನ್ನು ಯಾವುದೇ ವ್ಯಕ್ತಿ ಅಥವಾ ಗುಂಪು ಅಥವಾ ಸಂಘದ ಲಾಭಕ್ಕಾಗಿ ನಡೆಸಬಾರದು.
17. ಶಾಲೆಯನ್ನು ಚಾರ್ಟೆಡ್ ಅಕೌಂಟೆಂಟ್‌ನಿಂದ ಆಡಿಟ್ ಮಾಡಿಸಿ, ಪ್ರತಿಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.
18. ಸರ್ಕಾರಿ ಅಧಿಸೂಚನೆಯ [ಕನ್ನಡ ಭಾಷಾ ನೀತಿ-2016] ಪ್ರಕಾರ ಶಾಲೆಯು ಭಾಷಾ ನೀತಿಯನ್ನು ಅನುಸರಿಸುವುದು.
19. ಆರ್.ಟಿ.ಇ ಕಾಯ್ದೆ ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಆಡಳಿತ ಮಂಡಳಿ ಮತ್ತು ಶಿಕ್ಷಕರುಗಳು ಕಾರ್ಯನಿರ್ವಹಿಸುವುದು.
20. ಶಾಲೆ / ಆಡಳಿತ ಮಂಡಳಿಯು ಸರ್ಕಾರ ಮತ್ತು ಇಲಾಖೆಯ ನಿಯಮ ಮತ್ತು ನಿರ್ದೇಶನವನ್ನ ತಪ್ಪದೇ ಪಾಲಿಸುವುದು.
21. ಪ್ರತಿ ವರ್ಷದ ಮಾರ್ಚ್ ಅಂತ್ಯದ ಒಳಗಾಗಿ ಎಸ್.ಎ.ಟಿ.ಎಸ್‌ನಲ್ಲಿ ಶಾಲಾ ಮಾಹಿತಿಯನ್ನು ನಿಯಮನುಸಾರ ಅಪ್‌ಡೇಟ್ ಮಾಡುವುದನ್ನು ಕಡ್ಡಾಯಗೊಳಿಸಿದೆ.
22. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಆರ್.ಟಿ.ಇ ಕಾಯ್ದೆ 2009 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ 1983ರಡಿಯಲ್ಲಿ ರಚಿತವಾಗಿರುವ ನಿಯಮಗಳ ಅನುಸಾರ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
BIDAR(2905) ಜಿಲ್ಲೆ

1. ಸಂಬಂಧಿಸಿದ ಆಡಳಿತ ಮಂಡಳಿ SHARNBASVESHWAR VIDYA VARDHAK SANGHA
2. ಮುಖ್ಯ ಶಿಕ್ಷಕರು, / GORNALLI, Bidar / SHARANBASAVA LPS KAN GORNALLI
3. ಕ್ಷೇತ್ರ ಶಿಕ್ಷಣಾಧಿಕಾರಿಗಳು, BIDAR(290504) ತಾಲ್ಲೂಕು/ವಲಯ BIDAR(2905) ಜಿಲ್ಲೆ.
4. ಕಛೇರಿ ಪ್ರತಿ.

PRINCIPAL
Sharnbasava Public School
Gornalli, BIDAR-585403